रेलवे भर्ती बोर्ड | RAILWAY RECRUITMENT BOARD
सीईएन ०१/२०२६ सहायक लोको पायलट (एएलपी) के पद पर भर्ती
CEN 01/2026 Recruitment of Assistant Loco Pilot (ALP)

Test Date	05/11/2026
Test Time	4:00 PM - 5:00 PM
Subject	RRB ALP 2026 CBT 1

*** Note**
Correct Answer will carry 1 mark per Question.
Incorrect Answer will carry 1/3 Negative mark per Question.

1. Options shown in green color with a tick icon are correct.
2. Chosen option on the right of the question indicates the option selected by the candidate.

Section : **RRB ALP**

Q.1 C, D, E, F, X, Y ಮತ್ತು Z ಎಂಬ ಏಳು ಪೆಟ್ಟಿಗೆಗಳನ್ನು ಒಂದರ ಮೇಲೊಂದರಂತೆ ಇಡಲಾಗಿದೆ. ಆದರೆ ಅವು ಅದೇ ಕ್ರಮದಲ್ಲಿ ಇರಬೇಕಂತೇನಿಲ್ಲ. Y ಯ ಮೇಲೆ C ಅನ್ನು ಮಾತ್ರ ಇಡಲಾಗಿದೆ. Y ಮತ್ತು X ನಡುವೆ E ಅನ್ನು ಮಾತ್ರ ಇಡಲಾಗಿದೆ. D ಯ ಕೆಳಗೆ Z ಅನ್ನು ಮಾತ್ರ ಇಡಲಾಗಿದೆ. ಹಾಗಾದರೆ F ಮತ್ತು Z ನಡುವೆ ಎಷ್ಟು ಪೆಟ್ಟಿಗೆಗಳನ್ನು ಇಡಲಾಗಿದೆ?

Ans
- ✗ A. ನಾಲ್ಕು
- ✓ B. ಒಂದು
- ✗ C. ಮೂರು
- ✗ D. ಎರಡು

Q.2 P, Q, R, S, T, U ಮತ್ತು V ಪ್ರತಿಯೊಬ್ಬರಿಗೂ ಸೋಮವಾರದಿಂದ ಪ್ರಾರಂಭವಾಗಿ ಅದೇ ವಾರದ ಭಾನುವಾರ ಕೊನೆಗೊಳ್ಳುವ ಒಂದೇ ವಾರದ ಬೇರೆ ಬೇರೆ ದಿನಗಳಲ್ಲಿ ಪರೀಕ್ಷೆ ಇದೆ. S ಅವರಿಗೆ ಗುರುವಾರ ಪರೀಕ್ಷೆ ಇದೆ. U ಮತ್ತು S ನಡುವೆ ಇಬ್ಬರಿಗೆ ಮಾತ್ರ ಪರೀಕ್ಷೆ ಇದೆ. P ಅವರಿಗೆ U ಅವರ ತಕ್ಷಣದ ಮರುದಿನ ಪರೀಕ್ಷೆ ಇದೆ. R ಮತ್ತು Q ನಡುವೆ ಒಬ್ಬರಿಗೆ ಮಾತ್ರ ಪರೀಕ್ಷೆ ಇದೆ. V ಅವರಿಗೆ S ಅವರ ತಕ್ಷಣದ ಹಿಂದಿನ ದಿನದಂದು ಪರೀಕ್ಷೆ ಇದೆ. Q ಅವರಿಗೆ T ಅವರ ತಕ್ಷಣದ ಮರುದಿನ ಪರೀಕ್ಷೆ ಇದೆ. ಹಾಗಾದರೆ R ಅವರಿಗೆ ಯಾವಾಗ ಪರೀಕ್ಷೆ ಇದೆ?

Ans
- ✗ A. ಮಂಗಳವಾರ
- ✓ B. ಶುಕ್ರವಾರ
- ✗ C. ಶನಿವಾರ
- ✗ D. ಗುರುವಾರ

Q.3 ಒಂದು ವೇಳೆ $\tan(9x-15)^\circ = \cot(8x+20)^\circ$ ಆಗಿದ್ದರೆ, x ನ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✗ A. 4
- ✗ B. 10
- ✓ C. 5
- ✗ D. 8

Q.4 E, X, P, O, R, T ಮತ್ತು S ಎಂಬ ಪ್ರತಿಯೊಬ್ಬರಿಗೂ ಸೋಮವಾರದಿಂದ ಪ್ರಾರಂಭವಾಗಿ ಅದೇ ವಾರದ ಭಾನುವಾರದಂದು ಕೊನೆಗೊಳ್ಳುವಂತೆ ಒಂದೇ ವಾರದ ಬೇರೆ ಬೇರೆ ದಿನಗಳಲ್ಲಿ ಪರೀಕ್ಷೆ ಇದೆ. E ಮತ್ತು P ಅವರ ನಡುವೆ ಕೇವಲ ಮೂರು ಜನರಿಗೆ ಪರೀಕ್ಷೆ ಇದೆ. P ಅವರಿಗೆ ವಾರದ ಕೊನೆಯ ದಿನ ಪರೀಕ್ಷೆ ಇದೆ. T ಅವರಿಗೆ R ಅವರ ನಂತರದ ಎರಡನೇ ದಿನ ಪರೀಕ್ಷೆ ಇದೆ. O ಅವರಿಗೆ S ಅವರ ತಕ್ಷಣದ ಹಿಂದಿನ ದಿನ ಪರೀಕ್ಷೆ ಇದೆ. X ಅವರಿಗೆ ಶುಕ್ರವಾರ ಪರೀಕ್ಷೆ ಇರುವುದಿಲ್ಲ. ಹಾಗಾದರೆ X ಅವರ ನಂತರ ಎಷ್ಟು ಜನರಿಗೆ ಪರೀಕ್ಷೆ ಇದೆ?

Ans
- ✗ A. ಮೂರು
- ✗ B. ಎರಡು
- ✓ C. ಆರು
- ✗ D. ಐದು

Q.5 ಒಬ್ಬ ಅಂಗಡಿಯವನು ₹60,000 ಕ್ಕೆ ಒಂದೇ ರೀತಿಯ ಆರು ಮೊಬೈಲ್ ಫೋನ್ ಗಳನ್ನು ಖರೀದಿಸಿದನು. ಅವನು ಅವುಗಳಲ್ಲಿ ಎರಡನ್ನು ₹57,000 ಕ್ಕೆ ಮಾರಿದನು. ಅವನು ಮಾರಾಟ ಮಾಡಿದ ಎರಡು ಮೊಬೈಲ್ ಗಳಲ್ಲಿ ಆತ ಗಳಿಸಿದ ಶೇಕಡಾವಾರು ಲಾಭ ಎಷ್ಟು?

Ans
- ✗ A. 184%
- ✗ B. 182%
- ✗ C. 187%
- ✓ D. 185%

Q.6 ಒಂದು ವೇಳೆ 'A' ಎಂದರೆ '÷', 'B' ಎಂದರೆ '×', 'C' ಎಂದರೆ '+' ಮತ್ತು 'D' ಎಂದರೆ '−' ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆ ಸರಿಹೊಂದುತ್ತದೆ?

40 D 72 C 115 A 23 B 12 = ?

Ans
- ✗ A. 22
- ✗ B. 24
- ✗ C. 25
- ✓ D. 28

Q.7 ಒಂದು ಮಳೆನೀರು ಕೊಯ್ಲು ತೊಟ್ಟಿಯು 3.5 m ತ್ರಿಜ್ಯದ ಒಂದು ಅರ್ಧ ಗೋಳದ ಆಕಾರದಲ್ಲಿದೆ. ಭಾರಿ ಮಳೆಯಾದಾಗ, ತೊಟ್ಟಿಯು ಸಂಪೂರ್ಣವಾಗಿ ತುಂಬಿಕೊಳ್ಳುತ್ತದೆ. ಒಂದು ವೇಳೆ ಈ ತೊಟ್ಟಿಯ ನೀರನ್ನು 0.35 m ತ್ರಿಜ್ಯ ಮತ್ತು 0.7 m ಎತ್ತರದ ಸಿಲಿಂಡರಾಕಾರದ ಬಕೆಟ್ ಗಳನ್ನು ತುಂಬಲು ಬಳಸಿದರೆ, ಗರಿಷ್ಠ ಎಷ್ಟು ಬಕೆಟ್ ಗಳನ್ನು ಸಂಪೂರ್ಣವಾಗಿ ತುಂಬಿಸಬಹುದು?

Ans
- ✗ A. 353
- ✓ B. 333
- ✗ C. 373
- ✗ D. 313

Q.8 E, F, G, H, W, X ಮತ್ತು Y ಎಂಬ ಏಳು ಸ್ನೇಹಿತರು ಉತ್ತರಕ್ಕೆ ಮುಖ ಮಾಡಿ ಒಂದು ನೇರ ಸಾಲಿನಲ್ಲಿ ಕುಳಿತಿದ್ದಾರೆ. Y ಮತ್ತು W ನಡುವೆ ಕೇವಲ ಎರಡು ಜನರು ಕುಳಿತಿದ್ದಾರೆ. X ಅವರ ಬಲಕ್ಕೆ ಕೇವಲ E ಅವರು ಕುಳಿತಿದ್ದಾರೆ. W ಮತ್ತು E ನಡುವೆ ಕೇವಲ ಎರಡು ಜನರು ಕುಳಿತಿದ್ದಾರೆ. H ಅವರು F ಅವರ ಬಲಕ್ಕೆ ಯಾವುದಾದರೊಂದು ಸ್ಥಾನದಲ್ಲಿ ಆದರೆ G ಅವರ ಎಡಕ್ಕೆ ಯಾವುದಾದರೊಂದು ಸ್ಥಾನದಲ್ಲಿ ಕುಳಿತಿದ್ದಾರೆ. ಹಾಗಾದರೆ, ಸಾಲಿನ ಬಲ ತುದಿಯಿಂದ ಮೂರನೇ ಸ್ಥಾನದಲ್ಲಿ ಯಾರು ಕುಳಿತಿದ್ದಾರೆ?

Ans
- ✓ A. G
- ✗ B. F
- ✗ C. W
- ✗ D. X

Q.9 ನೀಡಲಾದ ಸರಣಿಯಲ್ಲಿ (?) ಜಾಗಕ್ಕೆ ಯಾವ ಆಯ್ಕೆಯು ಸರಿಹೊಂದುತ್ತದೆ?
28 33 39 46 54 63 ?

Ans
- ✗ A. 71
- ✗ B. 76
- ✗ C. 75
- ✓ D. 73

Blackbook

Q.10 T ಮತ್ತು U ಎಂಬ ಎರಡು ರೈಲುಗಳು ಸಮಾಂತರ ಹಳಿಗಳ ಮೇಲೆ ಪರಸ್ಪರ ಅಭಿಮುಖವಾಗಿ ಚಲಿಸುತ್ತಿವೆ. T ರೈಲು 210 m ಉದ್ದವಿದೆ ಮತ್ತು 40 km/hr ವೇಗದಲ್ಲಿ ಚಲಿಸುತ್ತಿದೆ. U ರೈಲು 240 m ಉದ್ದವಿದೆ ಮತ್ತು 50 km/hr ವೇಗದಲ್ಲಿ ಚಲಿಸುತ್ತಿದೆ. ಹಾಗಾದರೆ ಎರಡು ರೈಲುಗಳು ಸಂಧಿಸಿದ ಕ್ಷಣದಿಂದ ಪರಸ್ಪರ ದಾಟಲು ಎಷ್ಟು ಸಮಯ (ಸೆಕೆಂಡುಗಳಲ್ಲಿ) ತೆಗೆದುಕೊಳ್ಳುತ್ತವೆ?

Ans
- ✗ A. 24 ಸೆಕೆಂಡು
- ✗ B. 21 ಸೆಕೆಂಡು
- ✓ C. 18 ಸೆಕೆಂಡು
- ✗ D. 21.6 ಸೆಕೆಂಡು

Q.11 36784521 ಎಂಬ ಸಂಖ್ಯೆಯ ಪ್ರತಿಯೊಂದು ಅಂಕಿಗಳನ್ನು ಎಡದಿಂದ ಬಲಕ್ಕೆ ಇಳಿಕೆ ಕ್ರಮದಲ್ಲಿ ಜೋಡಿಸಲಾಗಿದೆ. ಹೀಗೆ ರೂಪುಗೊಂಡ ಹೊಸ ಸಂಖ್ಯೆಯಲ್ಲಿ ಈ ಕೆಳಗಿನ ಯಾವ ಅಂಕಿಯು ಬಲದಿಂದ ಐದನೇ ಸ್ಥಾನದಲ್ಲಿರುತ್ತದೆ?

Ans
- ✗ A. 7
- ✗ B. 6
- ✓ C. 5
- ✗ D. 4

Q.12 ಹಿತೇಶ್ ಅವರಿಗೆ ಅವರ ಮಗನ ಮೂರು ಪಟ್ಟು ವಯಸ್ಸಾಗಿದ್ದು ಅವರ ಮಗಳು ಮಗನಿಗಿಂತ 3 ವರ್ಷ ಚಿಕ್ಕವಳು. ಒಂದು ವೇಳೆ 3 ವರ್ಷಗಳ ಹಿಂದೆ ಈ ಮೂವರು ವ್ಯಕ್ತಿಗಳ ವಯಸ್ಸುಗಳ ಮೊತ್ತವು 83 ವರ್ಷಗಳಾಗಿದ್ದಲ್ಲಿ, ಹಿತೇಶ್ ಅವರ ಪ್ರಸ್ತುತ ವಯಸ್ಸು (ವರ್ಷಗಳಲ್ಲಿ) ಎಷ್ಟು?

Ans
- ✗ A. 67
- ✗ B. 64
- ✗ C. 68
- ✓ D. 57

Q.13 ಒಬ್ಬ ವ್ಯಕ್ತಿಯು ₹56,000 ಮೊತ್ತವನ್ನು ವಾರ್ಷಿಕ 12% ಸರಳ ಬಡ್ಡಿದರದಲ್ಲಿ 3 ವರ್ಷಗಳ ಅವಧಿಗೆ ಹೂಡಿಕೆ ಮಾಡಿದನು. ಹಾಗಾದರೆ 3 ವರ್ಷಗಳ ನಂತರ ಅವನಿಗೆ ಸಿಗುವ ಮೊತ್ತವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

Ans
- ✗ A. 75,160
- ✗ B. 78,160
- ✗ C. 77,160
- ✓ D. 76,160

Q.14 HUSBAND ಎಂಬ ಪದದಲ್ಲಿನ ಪ್ರತಿಯೊಂದು ಅಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಜೋಡಿಸಿದರೆ ಎಷ್ಟು ಅಕ್ಷರಗಳ ಸ್ಥಾನ (ಗಳು) ಬದಲಾಗದೆ ಹಾಗೆಯೇ ಉಳಿಯುತ್ತದೆ/ವೆ?

Ans
- ✗ A. 3
- ✓ B. 0
- ✗ C. 2
- ✗ D. 1

Q.15 ಈ ಪ್ರಶ್ನೆಯು ಕೆಳಗೆ ನೀಡಿರುವ ಪದಗಳನ್ನು ಆಧರಿಸಿದೆ.

ACT LAG GEL IDS

ಪ್ರತಿಯೊಂದು ಪದದಲ್ಲಿ, ಪ್ರತಿಯೊಂದು ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಅದರ ತಕ್ಷಣದ ಮುಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿ ವ್ಯಂಜನಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಅದರ ತಕ್ಷಣದ ಹಿಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಎಷ್ಟು ಅಕ್ಷರ ಸಮೂಹಗಳಲ್ಲಿ ಯಾವುದೇ ಸ್ವರಾಕ್ಷರ ಕಾಣಿಸುವುದಿಲ್ಲ?

Ans
- ✓ A. ನಾಲ್ಕು
- ✗ B. ಒಂದು
- ✗ C. ಮೂರು
- ✗ D. ಎರಡು

blackbook

Q.16 ನೀರಿನಲ್ಲಿ ಕರಗಿದಾಗ ಆಮ್ಲವನ್ನು ಉಂಟುಮಾಡದ ಅಲೋಹದ ಆಕ್ಸೈಡ್ ಅನ್ನು ಈ ಕೆಳಗಿನವುಗಳಿಂದ ಗುರುತಿಸಿರಿ.

Ans

✗ A. NO_2

✗ B. CO_2

✓ C. NO

✗ D. SO_2

Q.17 ಜರಡಿನಳಿಕೆ (sieve tubes) ಗಳ ಕಾರ್ಯನಿರ್ವಹಣೆಗೆ ಸಂಗಾತಿಕೋಶಗಳು ಹೇಗೆ ನೆರವಾಗುತ್ತವೆ?

Ans

✗ A. ಅವು ಜರಡಿ ನಳಿಕೆಗಳಲ್ಲಿ ಲ್ಯಾಟೆಕ್ಸ್ ಸಂಗ್ರಹವನ್ನು ನಿಯಂತ್ರಿಸುತ್ತವೆ

✓ B. ಅವು ಸಕ್ಕರೆಗಳ ಲೋಡ್ ಮತ್ತು ಅನ್‌ಲೋಡ್ ಮೇಲ್ವಿಚಾರಣೆ ಮಾಡುತ್ತವೆ

✗ C. ಅವು ಆಹಾರ ಸಾಮಗ್ರಿಗಳು ಮತ್ತು ರಾಳಗಳನ್ನು ಸಂಗ್ರಹಣೆ ಮಾಡುತ್ತವೆ

✗ D. ಅವು ಫ್ಲೋಯಮ್ ಗೆ ರಚನಾತ್ಮಕ ಬೆಂಬಲವನ್ನು ಒದಗಿಸುತ್ತವೆ

Q.18 ಹೊಗೆರಹಿತ ತಂಬಾಕು ಬಳಕೆ ತುಂಬಾ ಸಾಮಾನ್ಯವಾಗಿರುವ ಒಂದು ನಗರವನ್ನು ಕಲ್ಪಿಸಿಕೊಳ್ಳಿ. ಯಾವ ಸಾರ್ವಜನಿಕ ಆರೋಗ್ಯ ಸಮಸ್ಯೆಯು ಹೆಚ್ಚಾಗಿ ಕಂಡುಬರಬಹುದು?

Ans

✗ A. ವೈರಲ್ ಸೋಂಕುಗಳಲ್ಲಿ ಇಳಿಕೆಯಾಗುವುದು

✗ B. ಚರ್ಮದ ಅಲರ್ಜಿಗಳಲ್ಲಿ ಹೆಚ್ಚಳವಾಗುವುದು

✗ C. ಮೂಳೆ ಮುರಿತಗಳ ಹೆಚ್ಚಳವಾಗುವಿಕೆ

✓ D. ಬಾಯಿಯ ಕ್ಯಾನ್ಸರ್ ಪ್ರಮಾಣದಲ್ಲಿ ಹೆಚ್ಚಳವಾಗುವುದು

Q.19 ಸರಳೀಕರಿಸಿ: $(14pq + 15q)^2 - (14pq - 15q)^2$.

Ans

✗ A. $840p^2q$

✗ B. $420pq^2$

✗ C. $420p^2q^2$

✓ D. $840pq^2$

Q.20 ಕೆಳಗಿನ ಅಕ್ಷರ ಸರಣಿಯನ್ನು ಪರಿಶೀಲಿಸಿ ಮತ್ತು ಕೇಳಿರುವ ಪ್ರಶ್ನೆಗೆ ಉತ್ತರಿಸಿ

(ಎಡ) D G J M B W Z L E C I R U H Y L F K V X P W T O Q A (ಬಲ)

ತನ್ನ ತಕ್ಷಣದ ಹಿಂದೆ ಮತ್ತು ತನ್ನ ತಕ್ಷಣದ ಮುಂದೆ ಸ್ವರಾಕ್ಷರವನ್ನು ಹೊಂದಿರುವಂತಹ ಎಷ್ಟು ವ್ಯಂಜನಾಕ್ಷರಗಳು ಇಲ್ಲಿವೆ?

Ans

✓ A. ಮೂರು

✗ B. ಎರಡು

✗ C. ಒಂದು

✗ D. ಮೂರಕ್ಕಿಂತ ಹೆಚ್ಚು

Q.21 ಎರಡು ಸಂಖ್ಯೆಗಳ ಮ.ಸಾ.ಅ. 18 ಆಗಿದೆ ಮತ್ತು ಅವುಗಳ ಲ.ಸಾ.ಅ. 360 ಆಗಿದೆ. ಒಂದುವೇಳೆ ಅವುಗಳಲ್ಲಿ ಒಂದು ಸಂಖ್ಯೆಯು 90 ಆಗಿದ್ದರೆ, ಇನ್ನೊಂದು ಸಂಖ್ಯೆಯನ್ನು ಕಂಡುಹಿಡಿಯಿರಿ.

Ans

✓ A. 72

✗ B. 180

✗ C. 120

✗ D. 90

Q.22 ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗಕ್ಕೆ ಯಾವ ಸಂಖ್ಯೆಯು ಸರಿ ಹೊಂದುತ್ತದೆ?

36, 44, 60, 84, 116, ?

Ans

✗ A. 155

✗ B. 158

✓ C. 156

✗ D. 157

blackbook

Q.23 ಒಬ್ಬ ಸಾಲಗಾರನು ತಲಾ ₹35,280 ರ ಎರಡು ಸಮಾನ ವಾರ್ಷಿಕ ಕಂತುಗಳ ಮೂಲಕ ಸಾಲವನ್ನು ಮರುಪಾವತಿ ಮಾಡಿದನು. ಇದರಲ್ಲಿ ಮೊದಲ ಕಂತನ್ನು ಮೊದಲ ವರ್ಷದ ಕೊನೆಯಲ್ಲಿ ಪಾವತಿಸಬೇಕಾಗಿತ್ತು. ಒಂದು ವೇಳೆ ವಾರ್ಷಿಕವಾಗಿ ಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ ವಾರ್ಷಿಕ 5% ಚಕ್ರಬಡ್ಡಿ ಪಾವತಿಸಿದರೆ, ಪಾವತಿಸಿದ ಒಟ್ಟು ಬಡ್ಡಿ (₹ ಗಳಲ್ಲಿ) ಎಷ್ಟು?

Ans
- ✔ A. 4,960
- ✘ B. 4,800
- ✘ C. 5,280
- ✘ D. 4,640

Q.24 ಜ್ಯಾಕ್, ಕನಿಕಾ, ಮೆಹುಲ್, ನಿಧಿ, ಸಿಯಾ, ಟೀನಾ ಮತ್ತು ಯೋಗೇಶ್ ಎಂಬ ಏಳು ಜನರು ಒಂದು ವೃತ್ತಾಕಾರದ ಮೇಜಿನ ಸುತ್ತಲೂ ಮಧ್ಯಕ್ಕೆ ಮುಖ ಮಾಡಿ ಕುಳಿತಿದ್ದಾರೆ. ಯೋಗೇಶ್ ಅವರು ಕನಿಕಾ ಮತ್ತು ಮೆಹುಲ್ ಇವರಿಬ್ಬರಿಗೂ ತಕ್ಷಣದ ನೆರೆಹೊರೆಯವರಾಗಿದ್ದಾರೆ ಮತ್ತು ನಿಧಿ ಅವರ ಎಡಕ್ಕೆ ಎರಡನೆಯ ಸ್ಥಾನದಲ್ಲಿ ಕುಳಿತಿದ್ದಾರೆ. ಕನಿಕಾ ಅವರು ಜ್ಯಾಕ್ ಅವರ ಬಲಕ್ಕೆ ಎರಡನೇ ಸ್ಥಾನದಲ್ಲಿ ಕುಳಿತಿದ್ದಾರೆ. ಟೀನಾ ಅವರು ನಿಧಿ ಅವರ ತಕ್ಷಣದ ನೆರೆಹೊರೆಯವರಲ್ಲ. ಯೋಗೇಶ್ ಅವರ ಎಡದಿಂದ ಎಣಿಸಿದಾಗ ಯೋಗೇಶ್ ಮತ್ತು ಜ್ಯಾಕ್ ಅವರ ನಡುವೆ ಎಷ್ಟು ಜನರು ಕುಳಿತಿದ್ದಾರೆ?

Ans
- ✔ A. ಇಬ್ಬರು
- ✘ B. ಮೂವರು
- ✘ C. ಯಾರೂ ಇಲ್ಲ
- ✘ D. ಒಬ್ಬರು

Q.25 X, Y, Z, A ಮತ್ತು B ಎಂಬವರು ಬೇರೆ ಬೇರೆ ವಯಸ್ಸಿನವರಾಗಿದ್ದಾರೆ. ಒಬ್ಬ ವ್ಯಕ್ತಿಯು ಮಾತ್ರ X ಗಿಂತ ಕಿರಿಯನಾಗಿದ್ದಾನೆ. A ಯು B ಗಿಂತ ಹಿರಿಯನಾಗಿದ್ದಾನೆ ಮತ್ತು B ಯು Z ಗಿಂತ ಹಿರಿಯನಾಗಿದ್ದಾನೆ. Z ವ್ಯಕ್ತಿಯು X ಗಿಂತ ಹಿರಿಯನಾಗಿದ್ದಾನೆ. ಹಾಗಾದರೆ ಅತ್ಯಂತ ಹಿರಿಯ ವ್ಯಕ್ತಿ ಯಾರು?

Ans
- ✔ A. A
- ✘ B. Z
- ✘ C. Y
- ✘ D. X

Q.26 ಒಂದು ವನ್ಯಜೀವಿ ಸಮೀಕ್ಷೆಯು, 10% ವಾರ್ಷಿಕ ಹೆಚ್ಚಳದ ನಂತರ ಒಂದು ಮೀಸಲು ಪ್ರದೇಶದಲ್ಲಿ ಜಿಂಕೆಗಳ ಸಂಖ್ಯೆಯು 13,200 ಆಗಿದೆ ಎಂದು ವರದಿ ಮಾಡಿದೆ. ಹಾಗಾದರೆ ಒಂದು ವರ್ಷದ ಹಿಂದೆ ಜಿಂಕೆಗಳ ಸಂಖ್ಯೆ ಎಷ್ಟಿತ್ತು?

Ans
- ✘ A. 14520
- ✔ B. 12000
- ✘ C. 12120
- ✘ D. 11880

Q.27 ಒಂದು ನೀರಿರುವ ಗಾಜಿನಲ್ಲಿ ಪೆನ್ಸಿಲ್ ಅನ್ನು ಭಾಗಶಃ ಮುಳುಗಿಸಿದಾಗ ಅದು ಬಾಗಿದಂತೆ ಕಾಣುತ್ತದೆ. ಈ ಅವಲೋಕನವನ್ನು ಯಾವ ವಿದ್ಯಮಾನವು ಉತ್ತಮವಾಗಿ ವಿವರಿಸುತ್ತದೆ, ಮತ್ತು ಅದು ಎಲ್ಲಿ ಸಂಭವಿಸುತ್ತದೆ?

Ans
- ✔ A. ನೀರಿನ-ಗಾಳಿಯ ಅಂತರಸಂಪರ್ಕದಲ್ಲಿ ವಕ್ರೀಭವನ
- ✘ B. ನೀರಿನಲ್ಲಿ ಬೆಳಕಿನ ಪ್ರಸರಣ
- ✘ C. ನೀರಿನ ಮೇಲ್ಮೈ ಮೇಲೆ ಪ್ರತಿಫಲನ
- ✘ D. ನೀರಿನ ಅಣುಗಳಿಂದ ಬೆಳಕಿನ ಚದುರುವಿಕೆಯಿಂದ

Q.28 7-ಅಂಕಿಯ ಸಂಖ್ಯೆಯಾದ 43A762B ಅನ್ನು 12 ರಿಂದ ನಿಶ್ಯೇಷವಾಗಿ ಭಾಗಿಸಬಹುದು. ಹಾಗಾದರೆ (A + B) ಯ ಕನಿಷ್ಠ ಮೌಲ್ಯ ಎಷ್ಟು?

Ans
- ✘ A. 3
- ✘ B. 4
- ✘ C. 1
- ✔ D. 2

blackbook

Q.29 ಒಂದು ಕೊಳವೆಯು ಒಂದು ತೊಟ್ಟಿಯನ್ನು 12 ನಿಮಿಷಗಳಲ್ಲಿ ತುಂಬಿಸಬಲ್ಲದು. ಇನ್ನೊಂದು ಕೊಳವೆಯು ಸಂಪೂರ್ಣವಾಗಿ ತುಂಬಿದ ತೊಟ್ಟಿಯನ್ನು 14 ನಿಮಿಷಗಳಲ್ಲಿ ಖಾಲಿ ಮಾಡಬಲ್ಲದು. ಒಂದು ವೇಳೆ ಎರಡೂ ಕೊಳವೆಗಳನ್ನು ಒಟ್ಟಿಗೆ ತೆರೆದು ಖಾಲಿ ತೊಟ್ಟಿಯಲ್ಲಿ ಬಿಟ್ಟರೆ, ತೊಟ್ಟಿಯ ಮೂರನೇ ಎರಡರಷ್ಟು ಭಾಗವನ್ನು ತುಂಬಿಸಲು ಎಷ್ಟು ಸಮಯ (ನಿಮಿಷಗಳಲ್ಲಿ) ಬೇಕಾಗುತ್ತದೆ?

Ans
- ✗ A. 224
- ✗ B. 112
- ✓ C. 56
- ✗ D. 168

Q.30 5 kg ದ್ರವ್ಯರಾಶಿಯಿರುವ ಒಂದು ಪೆಟ್ಟಿಗೆಯನ್ನು 20 N ಸ್ಥಿರ ಬಲದೊಂದಿಗೆ ಸಮತಲ ಮೇಲ್ಮೈಯಲ್ಲಿ 4 ಮೀಟರ್‌ಗಳವರೆಗೆ ತಳ್ಳಲಾಗುತ್ತದೆ. ಒಂದು ವೇಳೆ ಪೆಟ್ಟಿಗೆಯು ನಿಶ್ಚಲ ಸ್ಥಿತಿಯಿಂದ ಪ್ರಾರಂಭವಾಗಿ 5 N ಘರ್ಷಣೆ ಬಲವನ್ನು ಅನುಭವಿಸಿದರೆ, ಕೆಲಸ-ಶಕ್ತಿ ಪ್ರಮೇಯದ ಪ್ರಕಾರ ಪೆಟ್ಟಿಗೆಯ ಅಂತಿಮ ಚಲನ ಶಕ್ತಿ ಎಷ್ಟು?

Ans
- ✗ A. 20 J
- ✓ B. 60 J
- ✗ C. 80 J
- ✗ D. 15 J

Q.31 ಕೆಳಗೆ ಕೊಟ್ಟಿರುವ ಸರಣಿಯನ್ನು ತಾರ್ಕಿಕವಾಗಿ ಪೂರ್ಣಗೊಳಿಸಲು ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಈ ಕೆಳಗಿನ ಯಾವ ಅಕ್ಷರ-ಸಂಖ್ಯಾ ಗುಚ್ಛವನ್ನು ಹಾಕಬೇಕು?

VAN16 WCP14 XER12 YGT10 ?

Ans
- ✗ A. ZGV8
- ✗ B. YIV8
- ✓ C. ZIV8
- ✗ D. YGV8

Q.32 A, B, F, G, H ಮತ್ತು I ಎಂಬ ಆರು ಪೆಟ್ಟಿಗೆಗಳನ್ನು ಒಂದರ ಮೇಲೊಂದರಂತೆ ಇಡಲಾಗಿದೆ. ಆದರೆ ಅವು ಅದೇ ಕ್ರಮದಲ್ಲಿ ಇರಬೇಕಂತೇನಿಲ್ಲ. I ಮತ್ತು B ಗಳ ನಡುವೆ ಎರಡು ಪೆಟ್ಟಿಗೆಗಳನ್ನು ಮಾತ್ರ ಇಡಲಾಗಿದೆ. H ಗಿಂತ ಮೇಲೆ G ಅನ್ನು ಮಾತ್ರ ಇಡಲಾಗಿದೆ. B ಗಿಂತ ಕೆಳಗೆ ಯಾವುದೇ ಪೆಟ್ಟಿಗೆಯನ್ನು ಇಡಲಾಗಿಲ್ಲ. F ಅನ್ನು A ಮೇಲಿನ ಸ್ಥಾನವೊಂದರಲ್ಲಿ ಇಡಲಾಗಿದೆ. ಹಾಗಾದರೆ A ಮತ್ತು F ನಡುವೆ ಎಷ್ಟು ಪೆಟ್ಟಿಗೆಗಳನ್ನು ಇಡಲಾಗಿದೆ?

Ans
- ✗ A. ಒಂದು
- ✗ B. ಮೂರು
- ✓ C. ಯಾವುದೂ ಇಲ್ಲ
- ✗ D. ಎರಡು

Q.33 ಸರಳ ಶಾಶ್ವತ ಅಂಗಾಂಶದ ಕೆಳಗಿನ ಯಾವ ಗುಣಲಕ್ಷಣವು ಜಲಸಸ್ಯಗಳು ತೇಲಲು ಸಹಾಯ ಮಾಡುತ್ತದೆ?

Ans
- ✗ A. ಲಿಗ್ನಿನ್‌ಯುಕ್ತ ಸ್ಕ್ಲೆರಂಕೈಮದಿಂದ ಉಂಟಾಗುವ ಗಡಸುತನ
- ✗ B. ಜೀವಕೋಶದ ಅಸಮಾನವಾಗಿ ದಪ್ಪವಾದ ಮೂಲೆಗಳು
- ✗ C. ಕೊಲಂಕೈಮದಲ್ಲಿ ಪೆಕ್ಟಿನ್ ಇರುವ ಕಾರಣ ನಮ್ಯತೆ
- ✓ D. ಪ್ಯಾರಂಕೈಮದಲ್ಲಿ ಗಾಳಿ ಅವಕಾಶಗಳ ಇರುವಿಕೆ

Q.34 ಕೆಳಗಿನ ಅಕ್ಷರ ಸರಣಿಯನ್ನು ಪರಿಶೀಲಿಸಿ ಮತ್ತು ಪ್ರಶ್ನೆಗೆ ಉತ್ತರಿಸಿ.

(ಎಡ)
L U F I T U A E B A D A Y J H F A K A N F G D (ಬಲ)

ಸರಣಿಯ ಬಲ ತುದಿಯಿಂದ ಎರಡನೇ ಮತ್ತು ಎಡ ತುದಿಯಿಂದ ಮೂರನೇ ಅಕ್ಷರಗಳ ನಡುವೆ ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಎಷ್ಟು ಅಕ್ಷರಗಳಿವೆ?

Ans
- ✔ A. ಯಾವುದೂ ಇಲ್ಲ
- ✘ B. ಒಂದು
- ✘ C. ಮೂರು
- ✘ D. ಎರಡು

Q.35 ಕೆಳಗಿನ ಅಕ್ಷರ ಸರಣಿಯನ್ನು ಪರಿಶೀಲಿಸಿ ಮತ್ತು ಪ್ರಶ್ನೆಗೆ ಉತ್ತರಿಸಿ.

(ಎಡ)
E I I N T I K E M R A H G D A H B G K I D F H (ಬಲ)

ಸರಣಿಯ ಬಲ ತುದಿಯಿಂದ ಏಳನೆಯ ಮತ್ತು ಎಡ ತುದಿಯಿಂದ ಎರಡನೆಯ ಅಕ್ಷರದ ನಡುವೆ ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಎಷ್ಟು ಅಕ್ಷರಗಳಿವೆ?

Ans
- ✔ A. ಆರು
- ✘ B. ಎಂಟು
- ✘ C. ಐದು
- ✘ D. ಏಳು

Q.36 ಚತುರ್ಭುಜ ABCD ಯಲ್ಲಿ, ∠A ಯ ಅಳತೆಯು ∠C ಗಿಂತ 19° ಹೆಚ್ಚಿದೆ, ∠B ಯು ∠C ಗಿಂತ 24° ಕಡಿಮೆಯಿದೆ ಮತ್ತು ∠D ಯು ∠B ಯ ಎರಡು ಪಟ್ಟಿಗಿಂತ 8° ಹೆಚ್ಚಿದೆ. ಹಾಗಾದರೆ ∠A + ∠D - ∠C ಯ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✘ A. 108^{o}
- ✘ B. 129^{o}
- ✔ C. 141^{o}
- ✘ D. 137^{o}

Q.37 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ ಸೇರದ ಅಕ್ಷರ-ಗುಚ್ಛ ಯಾವುದು?
(ಗಮನಿಸಿ: ಗುಂಪಿಗೆ ಸೇರದ ಅಕ್ಷರ-ಗುಚ್ಛವು ಅದರಲ್ಲಿನ ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ-ಗುಚ್ಛದಲ್ಲಿ ಅವುಗಳ ಸ್ಥಾನಗಳನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ.)

Ans
- ✘ A. JG-CK
- ✔ B. RO-KI
- ✘ C. YV-RZ
- ✘ D. IF-BJ

Q.38 ಈ ಪ್ರಶ್ನೆಯಲ್ಲಿ, ಈ ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳ ನಂತರದ ಷರತ್ತುಗಳ ಪ್ರಕಾರ ಅಕ್ಷರ ಸಂಕೇತಗಳನ್ನು ಬಳಸಿಕೊಂಡು ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಸಂಕೇತಿಸಲಾಗುತ್ತದೆ. ಈ ಷರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯೇ ನಿಮ್ಮ ಉತ್ತರವಾಗಿದೆ.
ಒಂದುವೇಳೆ ಯಾವುದೇ ಷರತ್ತುಗಳು ಅನ್ವಯಿಸದಿದ್ದರೆ, ಕೋಷ್ಟಕದಲ್ಲಿ ನೀಡಲಾದಂತೆ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನೇ ನೇರವಾಗಿ ಅನುಸರಿಸಬೇಕು.

ಸಂಖ್ಯೆ /ಚಿಹ್ನೆ 4 3 + % 8 6 @ ! & $

ಸಂಕೇತ Y W H O I J C M N K

ಷರತ್ತುಗಳು –
(i) ಒಂದು ವೇಳೆ ಮೊದಲ ಅಂಶವು ಚಿಹ್ನೆಯಾಗಿದ್ದರೆ ಮತ್ತು ಕೊನೆಯ ಅಂಶವು ಒಂದು ಸಂಖ್ಯೆಯಾಗಿದ್ದರೆ, ಮೊದಲ ಮತ್ತು ಕೊನೆಯ ಅಂಶಗಳ ಸಂಕೇತಗಳನ್ನು ಪರಸ್ಪರ ಬದಲಾಯಿಸಿ.
(ii) ಒಂದು ವೇಳೆ ಎರಡನೇ ಮತ್ತು ಮೂರನೇ ಅಂಶಗಳು ಬೆಸ ಸಂಖ್ಯೆಗಳಾಗಿದ್ದರೆ, ಮೂರನೇ ಅಂಶವನ್ನು ಎರಡನೇ ಅಂಶದ ಸಂಕೇತವಾಗಿ ಸಂಕೇತಿಸಿ.
(iii) ಒಂದು ವೇಳೆ ನಾಲ್ಕನೇ ಅಂಶವು ಚಿಹ್ನೆಯಾಗಿದ್ದರೆ ಮತ್ತು ಐದನೇ ಅಂಶವು ಸಂಖ್ಯೆಯಾಗಿದ್ದರೆ, ಎರಡೂ ಅಂಶಗಳನ್ನು © ಎಂದು ಸಂಕೇತಿಸಿ.

ಈ ಕೆಳಗಿನ ಸಂಖ್ಯಾ-ಚಿಹ್ನೆಗಳ ಗುಂಪಿನ ಸಂಕೇತ ಯಾವುದು?
4 3 + % 8

Ans
✗ A. YWHOI
✓ B. YWH©©
✗ C. YCHOI
✗ D. YWHOM

Q.39 ನೀರಿನ ವಿದ್ಯುತ್ ವಿಶ್ಲೇಷಣೆ (electrolysis)ಯನ್ನು ವಿಭಜನೆಯ ಕ್ರಿಯೆ ಎಂದು ಏಕೆ ವರ್ಗೀಕರಿಸಲಾಗಿದೆ?

Ans
✗ A. ವಿದ್ಯುತ್ ನೀರನ್ನು ಬಿಸಿ ಮಾಡುತ್ತದೆ
✓ B. ನೀರು ಜಲಜನಕ ಮತ್ತು ಆಮ್ಲಜನಕವಾಗಿ ವಿಭಜನೆಗೊಳ್ಳುತ್ತದೆ
✗ C. ಆಮ್ಲಜನಕವು ವಿದ್ಯುದ್ವಾರಗಳೊಂದಿಗೆ ಸಂಯೋಜನೆಗೊಳ್ಳುತ್ತದೆ
✗ D. ಆಮ್ಲಜನಕದ ಜಾಗಕ್ಕೆ ಜಲಜನಕ ಬರುತ್ತದೆ

Q.40 ಈ ಪ್ರಶ್ನೆಯು ಕೆಳಗೆ ನೀಡಲಾದ ಮೂರಂಕಿಯ ಐದು ಸಂಖ್ಯೆಗಳನ್ನು ಆಧರಿಸಿದೆ.
(ಎಡ) 682 315 947 524 761 (ಬಲ)
(ಉದಾಹರಣೆಗೆ- 697 – ಮೊದಲ ಅಂಕಿ = 6, ಎರಡನೇ ಅಂಕಿ = 9 ಮತ್ತು ಮೂರನೇ ಅಂಕಿ = 7)
ಸೂಚನೆ - ಎಲ್ಲಾ ಕ್ರಿಯೆಗಳನ್ನು ಎಡದಿಂದ ಬಲಕ್ಕೆ ನಡೆಸಬೇಕು.
ಅತ್ಯಂತ ದೊಡ್ಡ ಸಂಖ್ಯೆಯ ಎರಡನೇ ಅಂಕಿಯನ್ನು ಅತ್ಯಂತ ಸಣ್ಣ ಸಂಖ್ಯೆಯ ಮೊದಲ ಅಂಕಿಗೆ ಕೂಡಿಸಿದರೆ ಸಿಗುವ ಲಬ್ಧ ಎಷ್ಟು ?

Ans
✗ A. 9
✗ B. 8
✓ C. 7
✗ D. 10

Q.41 POINTED ಎಂಬ ಪದದಲ್ಲಿನ ಪ್ರತಿಯೊಂದು ಅಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಜೋಡಿಸಿದರೆ ಎಷ್ಟು ಅಕ್ಷರಗಳ ಸ್ಥಾನ (ಗಳು) ಬದಲಾಗದೆ ಹಾಗೆಯೇ ಉಳಿಯುತ್ತದೆ (ವೆ)?

Ans
✗ A. ಮೂರು
✗ B. ಒಂದು
✓ C. ಎರಡು
✗ D. ಯಾವುದೂ ಇಲ್ಲ

Q.42 ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಳದಲ್ಲಿ ಯಾವ ಆಯ್ಕೆ ಬರಬೇಕು?
42 60 76 90 102 112 ?

Ans
✗ A. 121
✗ B. 122
✓ C. 120
✗ D. 118

blackbook

Q.43 ಒಂದು ವಿತರಣಾ ವಾಹನವು 260 km ಪ್ರಯಾಣಿಸಲು 20 ಲೀಟರ್ ಡೀಸೆಲ್ ಬಳಸುತ್ತದೆ. ಹಾಗಾದರೆ ಆ ವಾಹನದ ಸರಾಸರಿ ಮೈಲೇಜ್ (ಪ್ರತಿ ಲೀಟರ್ ಗೆ km ಗಳಲ್ಲಿ) ಎಷ್ಟು?

Ans
- ✗ A. 12
- ✗ B. 14
- ✗ C. 10
- ✓ D. 13

Q.44 $\sqrt{48}, 4\sqrt{3}$ ಮತ್ತು $\sqrt{169}$ ಗಳ ನಾಲ್ಕನೇ ಸಮಾನುಪಾತವನ್ನು ಕಂಡುಹಿಡಿಯಿರಿ.

Ans
- ✓ A. 13
- ✗ B. 14
- ✗ C. $\sqrt{13}$
- ✗ D. $\sqrt{12}$

Q.45 ಈ ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳ ನಂತರದ ಪರತ್ತುಗಳ ಪ್ರಕಾರ ಅಕ್ಷರ ಸಂಕೇತಗಳನ್ನು ಬಳಸಿಕೊಂಡು ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಸಂಕೇತಿಸಲಾಗುತ್ತದೆ. ಈ ಪರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯೇ ನಿಮ್ಮ ಉತ್ತರವಾಗಿದೆ.
ಸೂಚನೆ: ಒಂದುವೇಳೆ ಯಾವುದೇ ಪರತ್ತುಗಳು ಅನ್ವಯಿಸದಿದ್ದರೆ, ಕೋಷ್ಟಕದಲ್ಲಿ ನೀಡಲಾದಂತೆ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನೇ ನೇರವಾಗಿ ಅನುಸರಿಸಬೇಕು.

ಸಂಖ್ಯೆ /ಚಿಹ್ನೆ 1 # 6 @ 3 % 8 & 5 $ 2 + 94

ಸಂಕೇತ HMBT KP AF URDWLQ

ಪರತ್ತುಗಳು –
(i) ಮೂರನೇ ಅಂಶವು ಬೆಸ ಸಂಖ್ಯೆಯಾಗಿದ್ದರೆ, ಎರಡನೇ ಅಂಶವನ್ನು © ಎಂದು ಸಂಕೇತಿಸಬೇಕು.
(ii) ಮೊದಲ ಅಂಶವು ಚಿಹ್ನೆಯಾಗಿದ್ದರೆ, ಮೊದಲ ಮತ್ತು ಕೊನೆಯ ಅಂಶಗಳಿಗೆ ಇರುವ ಸಂಕೇತಗಳನ್ನು ಪರಸ್ಪರ ಬದಲಾಯಿಸಬೇಕು.
(iii) ಐದನೇ ಅಂಶವು ಚಿಹ್ನೆಯಾಗಿದ್ದರೆ, ಮೂರನೇ ಅಂಶವನ್ನು ಐದನೇ ಅಂಶದ ಸಂಕೇತದಿಂದ ಸಂಕೇತಿಸಬೇಕು.

ಈ ಮೇಲಿನದನ್ನು ಆಧರಿಸಿ, ಕೆಳಗಿನ ಸಂಖ್ಯೆಗಳ ಗುಂಪಿನ ಸಂಕೇತ ಯಾವುದು?
85326

Ans
- ✓ A. A©KDB
- ✗ B. A©QDB
- ✗ C. A©KDA
- ✗ D. AUKDB

Q.46 ಜೋಯಾ ಅವರು A ಬಿಂದುವಿನಿಂದ ಚಾಲನೆ ಮಾಡಲು ಪ್ರಾರಂಭಿಸುತ್ತಾರೆ ಮತ್ತು ಪೂರ್ವಕ್ಕೆ 24 km ಚಲಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 20 km ಚಲಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 22 km ಚಲಿಸುತ್ತಾರೆ. ಮತ್ತೊಮ್ಮೆ ಅವರು ಬಲಕ್ಕೆ ತಿರುಗಿ 31 km ಚಲಿಸುತ್ತಾರೆ. ಅಂತಿಮವಾಗಿ ಅವರು ಎಡಕ್ಕೆ ತಿರುಗಿ 2 km ಚಲಿಸುತ್ತಾರೆ ಮತ್ತು B ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಾಲನೆ ಮಾಡಬೇಕು? (ನಿರ್ದಿಷ್ಟ ಪಡಿಸದ ಹೊರತು ಎಲ್ಲಾ ತಿರುವುಗಳು ಕೇವಲ 90° ತಿರುವುಗಳಾಗಿವೆ.)

Ans
- ✗ A. 7 km ದಕ್ಷಿಣದ ಕಡೆಗೆ
- ✗ B. 8 km ಪಶ್ಚಿಮದ ಕಡೆಗೆ
- ✓ C. 11 km ದಕ್ಷಿಣದ ಕಡೆಗೆ
- ✗ D. 9 km ಉತ್ತರದ ಕಡೆಗೆ

Q.47 10 m ಆಳ ಮತ್ತು 36 m ಅಗಲವಿರುವ ನದಿಯೊಂದು 2.7 km/hr ವೇಗದಲ್ಲಿ ಹರಿಯುತ್ತಿದೆ. ಹಾಗಾದರೆ ಪ್ರತಿ ನಿಮಿಷಕ್ಕೆ ಸಮುದ್ರಕ್ಕೆ ಸೇರುವ ನೀರಿನ ಪ್ರಮಾಣವನ್ನು (m^3 ಗಳಲ್ಲಿ) ಕಂಡುಹಿಡಿಯಿರಿ.

Ans
- ✗ A. 10,260
- ✗ B. 12,600
- ✗ C. 12,000
- ✓ D. 16,200

blackbook

Q.48 ಒಂದು ಕಾರಿನ ರೇಡಿಯೇಟರ್ ನಲ್ಲಿ 63% ಘನೀಕರಣರೋಧಕ ದ್ರಾವಣ ಹೊಂದಿರಬೇಕು. ಒಬ್ಬ ವಾಹನ ಚಾಲಕನು 4 ಲೀಟರ್ ಗಳ 23% ಘನೀಕರಣರೋಧಕ ದ್ರಾವಣವನ್ನು ಹೊಂದಿದ್ದಾನೆ. ಅವನು 63% ಘನೀಕರಣರೋಧಕ ದ್ರಾವಣವನ್ನು ತಯಾರಿಸಲು ಎಷ್ಟು ಲೀಟರ್ 99% ಘನೀಕರಣರೋಧಕ ದ್ರಾವಣವನ್ನು (2 ದಶಮಾಂಶ ಸ್ಥಾನಗಳ ಪೂರ್ಣಾಂಕಕ್ಕೆ ಸರಿಹೊಂದಿಸಿ) ತನ್ನ ದ್ರಾವಣಕ್ಕೆ ಸೇರಿಸಬೇಕು?

Ans

- ✗ A. 6.05
- ✗ B. 7.21
- ✓ C. 4.44
- ✗ D. 10.25

Q.49 ಒಂದು ಶಾಲೆಯು, 49 m x 196 m ಅಳತೆಯ ಆಯತಾಕಾರದ ಉದ್ಯಾನವನವನ್ನು ಅಷ್ಟೇ ವಿಸ್ತೀರ್ಣದ ಚೌಕಾಕಾರದ ಉದ್ಯಾನವನವನ್ನಾಗಿ ಬದಲಾಯಿಸಲು ಯೋಜಿಸಿದೆ. ಹಾಗಾದರೆ ಚೌಕಾಕಾರದ ಉದ್ಯಾನವನದ ಬದಿಯ ಉದ್ದ (ಮೀಟರುಗಳಲ್ಲಿ) ಎಷ್ಟಿರುತ್ತದೆ?

Ans

- ✗ A. 147
- ✓ B. 98
- ✗ C. 122
- ✗ D. 70

Q.50 FROCKED ಎಂಬ ಪದದಲ್ಲಿರುವ, ಪ್ರತಿ ಅಕ್ಷರವನ್ನು ಇಂಗ್ಲೀಷ್ ವರ್ಣಮಾಲೆಯ ಅನುಕ್ರಮದಲ್ಲಿ ಜೋಡಿಸಲಾಗಿದೆ. ಹೀಗೆ ರೂಪುಗೊಂಡ ಹೊಸ ಅಕ್ಷರ ಸಮೂಹದಲ್ಲಿ ಎಡದಿಂದ ಮೂರನೇ ಅಕ್ಷರ ಮತ್ತು ಬಲದಿಂದ ಎರಡನೆಯ ಅಕ್ಷರಗಳ ನಡುವೆ ಇಂಗ್ಲೀಷ್ ವರ್ಣಮಾಲೆಯ ಅನುಕ್ರಮದಲ್ಲಿ ಎಷ್ಟು ಅಕ್ಷರಗಳಿವೆ?

Ans

- ✗ A. 8
- ✗ B. 10
- ✗ C. 12
- ✓ D. 9

Q.51 ಕೆಳಗೆ ಕೊಟ್ಟಿರುವ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆರಿಸಿ. ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

NJG–DZW
DZW–TPM

Ans

- ✗ A. VQM–KGD
- ✗ B. VRO–KHD
- ✓ C. VRO–LHE
- ✗ D. VQM–LHE

Q.52 ಒಂದು ವೃತ್ತದ AB ಮತ್ತು CD ಎಂಬ ಜ್ಯಾಗಳು ಒಂದು ವೃತ್ತದ ಒಳಗಿನ T ಬಿಂದುವಿನಲ್ಲಿ ಛೇದಿಸುತ್ತವೆ. ಒಂದುವೇಳೆ AB = 27 cm, AT = 16 cm ಮತ್ತು TC = 20 cm ಆಗಿದ್ದರೆ, CD ಯ ಉದ್ದ (cm ಗಳಲ್ಲಿ) ಎಷ್ಟು?

Ans

- ✗ A. 22.3
- ✗ B. 35.6
- ✓ C. 28.8
- ✗ D. 31.2

Q.53 ಒಂದುವೇಳೆ

$$4(\sec^2 59^\circ - \cot^2 31^\circ) + \frac{6\sqrt{2}}{7}\cos 45^\circ - 2\alpha \tan^2 56^\circ \times \tan^2 34^\circ = 2\alpha$$

ಆಗಿದ್ದರೆ, α ದ ಮೌಲ್ಯವು:

Ans
- ✔ A. $1\frac{3}{14}$
- ✘ B. $2\frac{3}{14}$
- ✘ C. $2\frac{5}{14}$
- ✘ D. $1\frac{5}{14}$

Q.54 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕು ಅಕ್ಷರ ಗುಚ್ಛ ಜೋಡಿಗಳಲ್ಲಿ ಮೂರು ಅಕ್ಷರ ಗುಚ್ಛ ಜೋಡಿಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಒಂದೇ ರೀತಿ ಇವೆ ಮತ್ತು ಹೀಗಾಗಿ ಅವೆಲ್ಲವೂ ಒಂದೇ ಗುಂಪಿಗೆ ಸೇರುತ್ತವೆ. ಆ ಗುಂಪಿಗೆ ಸೇರದ ಜೋಡಿ ಯಾವುದು?
(ಸೂಚನೆ: ಗುಂಪಿಗೆ ಸೇರದ ಅಕ್ಷರ-ಗುಚ್ಛವು, ಅದರಲ್ಲಿರುವ ವ್ಯಂಜನಗಳು/ಸ್ವರಾಕ್ಷರಗಳು ಅಥವಾ ಅವುಗಳ ಸ್ಥಾನವನ್ನು ಆಧರಿಸಿ ಗುಂಪಿಗೆ ಸೇರದೆ ಇರುವುದಲ್ಲ.)

Ans
- ✘ A. LI–GD
- ✘ B. NK–IF
- ✔ C. VS–PP
- ✘ D. BY–WT

Q.55 ಒಂದು ವೇಳೆ 'A' ಎಂದರೆ '÷', 'B' ಎಂದರೆ '×', 'C' ಎಂದರೆ '+' ಮತ್ತು 'D' ಎಂದರೆ '–' ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆ ಸರಿಹೊಂದುತ್ತದೆ?

107 D 132 A 4 B 3 C 11 = ?

Ans
- ✔ A. 19
- ✘ B. 14
- ✘ C. 15
- ✘ D. 16

Q.56 ಈ ಕೆಳಗೆ ಎರಡು ಸಂಖ್ಯಾಗಣಗಳನ್ನು ನೀಡಲಾಗಿದೆ. ಈ ಪ್ರತಿಯೊಂದು ಸಂಖ್ಯಾಗಣದಲ್ಲಿ ಮೊದಲನೇ ಸಂಖ್ಯೆಯ ಮೇಲೆ ಒಂದು ವಿಶಿಷ್ಟ ಗಣಿತದ ಕ್ರಿಯೆ/ಗಳನ್ನು ನಡೆಸಿದಾಗ ಎರಡನೇ ಸಂಖ್ಯೆ ದೊರೆಯುತ್ತದೆ/ವೆ. ಅದೇ ರೀತಿ ಎರಡನೇ ಸಂಖ್ಯೆಯ ಮೇಲೆ ಒಂದು ವಿಶಿಷ್ಟ ಗಣಿತದ ಕ್ರಿಯೆ/ಗಳನ್ನು ನಡೆಸಿದಾಗ ಮೂರನೇ ಸಂಖ್ಯೆ ದೊರೆಯುತ್ತದೆ/ವೆ ಹಾಗೂ ಈ ಪ್ರಕ್ರಿಯೆಯು ಇದೇ ಪ್ರಕಾರದಲ್ಲಿ ಮುಂದುವರಿಯುತ್ತದೆ. ನೀಡಿರುವ ಆಯ್ಕೆಗಳಲ್ಲಿ ಯಾವ ಆಯ್ಕೆಯು ನೀಡಲಾದ ಸಂಖ್ಯಾಗಣಗಳಲ್ಲಿರುವಂತಹ ಕ್ರಿಯೆಗಳ ಗಣವನ್ನು ಅನುಸರಿಸುತ್ತದೆ?
ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಡೆಸಬೇಕು. ಉದಾ: 13 ಅನ್ನು ತೆಗೆದುಕೊಳ್ಳೋಣ. 13ಕ್ಕೆ ಕೂಡಿಸುವುದು/ಕಳೆಯುವುದು/ಗುಣಿಸುವುದು ಇತ್ಯಾದಿ ಕ್ರಿಯೆಗಳನ್ನು ಮಾಡಬಹುದು ಆದರೆ 13 ಅನ್ನು 1 ಮತ್ತು 3 ಆಗಿ ವಿಭಜಿಸಿ, ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

6 - 36 - 46 - 56
8 - 64 - 74 - 84

Ans
- ✘ A. 11 - 131 - 141 - 151
- ✘ B. 15 - 225 - 235 - 255
- ✔ C. 9 - 81 - 91 - 101
- ✘ D. 10 - 100 - 120 - 130

Q.57 ಈ ಪ್ರಶ್ನೆಯು ಈ ಕೆಳಗಿನ ಪದಗಳನ್ನು ಆಧರಿಸಿದೆ.

DUB OWE SKI FIN

ಒಂದು ವೇಳೆ ಪ್ರತಿ ಪದದಲ್ಲಿ, ಪ್ರತಿ ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಅದರ ತಕ್ಷಣದ ನಂತರ ಬರುವ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿ ವ್ಯಂಜನಾಕ್ಷರವನ್ನು ಆಂಗ್ಲ ವರ್ಣಮಾಲೆಯ ಅನುಕ್ರಮದಲ್ಲಿ ಅದರ ತಕ್ಷಣದ ಮೊದಲು ಬರುವ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ. ಈ ರೀತಿಯಾಗಿ ರಚನೆಯಾಗುವ ಎಷ್ಟು ಅಕ್ಷರ-ಗುಚ್ಛಗಳಲ್ಲಿ ಯಾವುದೇ ಸ್ವರಾಕ್ಷರವು ಇರುವುದಿಲ್ಲ?

Ans
- ✗ A. ನಾಲ್ಕು
- ✗ B. ಮೂರು
- ✗ C. ಒಂದು
- ✓ D. ಎರಡು

Q.58 ಒಂದು ಉಡುಪಿನ ನಮೂದಿತ ಬೆಲೆಯು ₹1,200 ಆಗಿದೆ. ಒಂದು ವೇಳೆ ಮಾರಾಟದ ಬೆಲೆಯು ₹960 ಆಗಿದ್ದರೆ, ಶೇಕಡಾವಾರು ರಿಯಾಯಿತಿ ಎಷ್ಟು?

Ans
- ✗ A. 25%
- ✓ B. 20%
- ✗ C. 15%
- ✗ D. 30%

Q.59 ಈ ಕೆಳಗೆ ಎರಡು ಸಂಖ್ಯಾ ಗಣಗಳನ್ನು ನೀಡಲಾಗಿದೆ. ಈ ಪ್ರತಿಯೊಂದು ಸಂಖ್ಯಾ ಗಣದಲ್ಲಿ, ಮೊದಲ ಸಂಖ್ಯೆಯ ಮೇಲೆ ಒಂದು ನಿರ್ದಿಷ್ಟ ಗಣಿತದ ಕ್ರಿಯೆಯನ್ನು ನಡೆಸುವ ಮೂಲಕ ಎರಡನೇ ಸಂಖ್ಯೆಯನ್ನು ಪಡೆಯಲಾಗಿದೆ. ಅದೇ ರೀತಿಯಲ್ಲಿ, ಎರಡನೇ ಸಂಖ್ಯೆಯ ಮೇಲೆ ಒಂದು ನಿರ್ದಿಷ್ಟ ಗಣಿತದ ಕ್ರಿಯೆಯನ್ನು ನಡೆಸುವ ಮೂಲಕ ಮೂರನೇ ಸಂಖ್ಯೆಯನ್ನು ಪಡೆಯಲಾಗಿದೆ, ಮತ್ತು ಈ ಪ್ರಕ್ರಿಯೆಯು ಹೀಗೆಯೇ ಮುಂದುವರೆಯುತ್ತದೆ. ಹಾಗಾದರೆ ಈ ಕೆಳಗಿನ ಯಾವ ಆಯ್ಕೆಯು ಪ್ರಶ್ನೆಯಲ್ಲಿರುವ ಸಂಖ್ಯಾ ಗಣಗಳ ರೀತಿಯ ಗಣಿತದ ಕ್ರಿಯೆಯನ್ನು ಅನುಸರಿಸುತ್ತದೆ?
(ಸೂಚನೆ – ಕ್ರಿಯೆಗಳನ್ನು ನಡೆಸುವಾಗ ಎರಡು/ಮೂರು ಅಂಕಿಗಳ ಸಂಖ್ಯೆಯನ್ನು ಬೇರೆ ಬೇರೆ ಪ್ರತ್ಯೇಕ ಅಂಕಿಗಳಾಗಿ ವಿಭಜಿಸುವಂತಿಲ್ಲ. ಉದಾಹರಣೆಗೆ 37 ರ ನಂತರ 10 ಬಂದರೆ, ಕ್ರಿಯೆಯು 3+7 ಆಗಿರಬಾರದು, ಏಕೆಂದರೆ ಎರಡು ಅಂಕಿಗಳ ಸಂಖ್ಯೆಯನ್ನು ಬೇರೆ ಬೇರೆ ಪ್ರತ್ಯೇಕ ಅಂಕಿಗಳಾಗಿ ವಿಭಜಿಸುವಂತಿಲ್ಲ.)
27 - 31 - 248 - 237
11 - 15 - 120 - 109

Ans
- ✗ A. 3 - 8 - 64 - 54
- ✗ B. 3 - 7 - 70 - 60
- ✗ C. 1 - 4 - 28 - 17
- ✓ D. 26 - 30 - 240 - 229

Q.60 ಈ ಪ್ರಶ್ನೆಯಲ್ಲಿ, ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳನ್ನು ಅನುಸರಿಸುವ ಷರತ್ತುಗಳ ಪ್ರಕಾರ, ಅಕ್ಷರ ಸಂಕೇತಗಳನ್ನು ಬಳಸಿಕೊಂಡು ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಸಂಕೇತಿಸಲಾಗಿದೆ. ಈ ಷರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯು ನಿಮ್ಮ ಉತ್ತರವಾಗಿದೆ. ಒಂದು ವೇಳೆ ಯಾವುದೇ ಷರತ್ತುಗಳು ಅನ್ವಯವಾಗದಿದ್ದರೆ, ಆಗ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನು ಕೋಷ್ಟಕದಲ್ಲಿ ನೀಡಿರುವಂತೆಯೇ ನೇರವಾಗಿ ಅನುಸರಿಸಬೇಕು.

ಸಂಖ್ಯೆ / ಚಿಹ್ನೆ 3 @ 8 5 $ # 2 % 7 & 4 9 1 6

ಸಂಕೇತ KF UPLDBQRE TAHM

ಷರತ್ತುಗಳು –
(i) ಮೊದಲ ಘಟಕಾಂಶವು ಚಿಹ್ನೆಯಾಗಿದ್ದರೆ ಮತ್ತು ಕೊನೆಯ ಘಟಕಾಂಶವು ಸಂಖ್ಯೆಯಾಗಿದ್ದರೆ, ಮೊದಲ ಮತ್ತು ಕೊನೆಯ ಘಟಕಾಂಶಗಳ ಸಂಕೇತಗಳನ್ನು ಪರಸ್ಪರ ಬದಲಾಯಿಸಬೇಕು.
(ii) ಎರಡನೇ ಮತ್ತು ಮೂರನೇ ಘಟಕಾಂಶಗಳು ಸಮ ಸಂಖ್ಯೆಗಳಾಗಿದ್ದರೆ, ಮೂರನೇ ಘಟಕಾಂಶವನ್ನು ಎರಡನೇ ಘಟಕಾಂಶದ ಸಂಕೇತವಾಗಿ ಸಂಕೇತಿಸಬೇಕು.
(iii) ನಾಲ್ಕನೇ ಘಟಕಾಂಶವು ಚಿಹ್ನೆಯಾಗಿದ್ದರೆ, ನಾಲ್ಕನೇ ಘಟಕಾಂಶವನ್ನು © ಎಂದು ಸಂಕೇತಿಸಬೇಕು.

ಈ ಕೆಳಗಿನ ಸಂಖ್ಯಾ-ಚಿಹ್ನೆಗಳ ಗುಂಪಿನ ಸಂಕೇತ ಯಾವುದು?
9865@

Ans
✔ A. AUUPF
✘ B. AUMPF
✘ C. AUMPM
✘ D. AUUPM

Q.61 ಈ ಕೆಳಗಿನ ಸಮೀಕರಣದಲ್ಲಿ, ಒಂದುವೇಳೆ '+' ಮತ್ತು '−' ಗಳನ್ನು ಅದಲುಬದಲು ಮಾಡಿದರೆ ಹಾಗೂ '×' ಮತ್ತು '÷' ಗಳನ್ನು ಅದಲುಬದಲು ಮಾಡಿದರೆ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆಯು ಸರಿಹೊಂದುತ್ತದೆ?

9 ÷ 5 + 10 × 2 − 3 = ?

Ans
✘ A. 55
✘ B. 50
✔ C. 43
✘ D. 40

Q.62 ಈ ಕೆಳಗೆ ನೀಡಲಾಗಿರುವ ಎರಡು ಜೋಡಿಗಳು ಅನುಸರಿಸಿರುವ ಮಾದರಿಯನ್ನೇ ಅನುಸರಿಸುವ ಜೋಡಿಯನ್ನು ಆರಿಸಿ. ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

VZY−XBA
CGF−EIH

Ans
✘ A. BEC−DHG
✔ B. BFE−DHG
✘ C. BEC−CGF
✘ D. BFE−CHF

Q.63 ವಿಕ್ರಾಂತ್ ಅವರು A ಬಿಂದುವಿನಿಂದ ಚಾಲನೆ ಮಾಡಲು ಪ್ರಾರಂಭಿಸುತ್ತಾರೆ ಮತ್ತು 55 km ಉತ್ತರಕ್ಕೆ ಚಲಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 60 km ಚಲಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 70 km ಚಲಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 71 km ಚಲಿಸುತ್ತಾರೆ. ಅವರು ಅಂತಿಮವಾಗಿ ಬಲಕ್ಕೆ ತಿರುಗಿ 15 km ಚಲಿಸುತ್ತಾರೆ ಮತ್ತು P ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಾಲನೆ ಮಾಡಬೇಕು?
(ಸೂಚನೆ: ನಿರ್ದಿಷ್ಟವಾಗಿ ಹೇಳಿರುವುದನ್ನು ಬಿಟ್ಟು ಉಳಿದೆಲ್ಲಾ ತಿರುವುಗಳು ಕೇವಲ 90° ತಿರುವುಗಳಾಗಿವೆ)

Ans
✘ A. 13 km ಪಶ್ಚಿಮಕ್ಕೆ
✘ B. 10 km ಪೂರ್ವಕ್ಕೆ
✘ C. 12 km ಪಶ್ಚಿಮಕ್ಕೆ
✔ D. 11 km ಪೂರ್ವಕ್ಕೆ

blackbook

Q.64 ಒಂದು ಆನ್ಲೈನ್ ಕಲಿಕಾ ವೇದಿಕೆಯು ಒಂದು ಪ್ರವೇಶ ಅಭಿಯಾನದ ಸಂದರ್ಭದಲ್ಲಿ ತನ್ನ ವಾರ್ಷಿಕ ಚಂದಾದಾರಿಕೆ ಶುಲ್ಕವನ್ನು 25% ಕಡಿಮೆ ಮಾಡಿತು ಮತ್ತು ನಂತರ ರಿಯಾಯಿತಿ ಚಂದಾದಾರಿಕೆ ಶುಲ್ಕವನ್ನು 20% ನಷ್ಟು ಹೆಚ್ಚಿಸಿತು. ಒಂದು ವೇಳೆ ಮೂಲ ಚಂದಾದಾರಿಕೆ ಶುಲ್ಕವು ₹8,000 ಆಗಿದ್ದರೆ, ಅಂತಿಮ ಚಂದಾದಾರಿಕೆ ಶುಲ್ಕ (₹ ಗಳಲ್ಲಿ) ಎಷ್ಟು?

Ans
- ✗ A. 7,400
- ✗ B. 7,000
- ✓ C. 7,200
- ✗ D. 7,600

Q.65 ಆಹಾರ ವಿತರಣಾ ಕಂಪನಿಯು ಏಳು ದಿನಗಳಲ್ಲಿ ಪೂರ್ಣಗೊಂಡ ವಿತರಣೆಗಳ ಸಂಖ್ಯೆಯನ್ನು 48, 50, 48, 46, x, 50 ಮತ್ತು 48 ಎಂದು ದಾಖಲಿಸಿದ್ದು, ಇಲ್ಲಿ x ಒಂದು ಧನಾತ್ಮಕ ಪೂರ್ಣಾಂಕವಾಗಿದೆ. ಒಂದು ವೇಳೆ 48 ವಿಶಿಷ್ಟ ರೂಢಿಬೆಲೆ ಆಗಿ ಉಳಿದಿದ್ದರೆ, x ನ ಅತ್ಯಂತ ಸಣ್ಣ ಸಂಭವನೀಯ ಮೌಲ್ಯವನ್ನು ನಿರ್ಧರಿಸಿ.

Ans
- ✗ A. 48
- ✓ B. 1
- ✗ C. 50
- ✗ D. 46

Q.66 ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ 38 ಎಂಬುದು 210 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿ 30 ಎಂಬುದು 170 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ, 22 ಎಂಬುದು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಬೇಕು. ಉದಾ. 13 – 13 ರ ಮೇಲೆ ಕೂಡಿಸುವುದು/ಕಳೆಯುವುದು/ ಗುಣಿಸುವುದು ಮುಂತಾದ ಕ್ರಿಯೆಗಳನ್ನು ಮಾಡುವಾಗ 13 ಎಂದು ಪರಿಗಣಿಸಿ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಎಂದು ಬೇರೆ ಬೇರೆಯಾಗಿ ಪರಿಗಣಿಸಿ ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

Ans
- ✗ A. 128
- ✗ B. 132
- ✓ C. 130
- ✗ D. 126

Q.67 ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಎಂದು ಗುರುತಿಸಲಾದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಈ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಬೇಕು ಮತ್ತು ಅತ್ಯಂತ ಸೂಕ್ತವಾದ ಉತ್ತರವನ್ನು ಆರಿಸಬೇಕು.
ಪ್ರಶ್ನೆ:
Q, L, M, R ಮತ್ತು E ಎಂಬ 5 ಕೋಲುಗಳಲ್ಲಿ, ಪ್ರತಿಯೊಂದು ಬೇರೆ ಬೇರೆ ಎತ್ತರವನ್ನು ಹೊಂದಿದ್ದು, ಯಾವ ಕೋಲು ಅತ್ಯಂತ ಉದ್ದವಾಗಿದೆ?
ಹೇಳಿಕೆಗಳು:
(I) M ಕೋಲು ಒಂದು ಕೇವಲ ಒಂದು ಕೋಲಿಗಿಂತ ಹೆಚ್ಚು ಉದ್ದವಾಗಿದೆ. R ಕೋಲು L ಗಿಂತ ಗಿಡ್ಡವಾಗಿದೆ, ಆದರೆ Q ಗಿಂತ ಉದ್ದವಾಗಿದೆ.
(II) R ಕೋಲು E ಗಿಂತ ಉದ್ದವಾಗಿದೆ.

Ans
- ✗ A. ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ
- ✗ B. ಹೇಳಿಕೆ I ಮತ್ತು ಹೇಳಿಕೆ II ಎರಡರಲ್ಲಿರುವ ಒಟ್ಟು ಮಾಹಿತಿಯು ಪ್ರಶ್ನೆಗೆ ಉತ್ತರಿಸಲು **ಸಾಕಾಗುವುದಿಲ್ಲ**
- ✓ C. ಹೇಳಿಕೆ I ಮತ್ತು ಹೇಳಿಕೆ II ಇವೆರಡರ ಒಟ್ಟು (ಮತ್ತು ಕೇವಲ ಹೇಳಿಕೆ I ಅಥವಾ ಕೇವಲ ಹೇಳಿಕೆ II ಅಲ್ಲ) ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆ
- ✗ D. ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ

Q.68 ಈ ಕೆಳಗಿನ ಸರಣಿಯು ತಾರ್ಕಿಕವಾಗಿ ಪೂರ್ಣಗೊಳ್ಳಬೇಕಾದರೆ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಅಕ್ಷರ-ಸಂಖ್ಯಾ ಗುಚ್ಛವನ್ನು ಹಾಕಬೇಕು?

GUL 2 JSJ -4 MQH 8 ? SMD 32

Ans
- ✓ A. POF -16
- ✗ B. KYT -11
- ✗ C. HJI -43
- ✗ D. KOI -21

Q.69 ಇಂಗ್ಲಿಷ್ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ TXBZ ಎಂಬುದು ಒಂದು ನಿರ್ದಿಷ್ಟ ರೀತಿಯಲ್ಲಿ AEIG ಗೆ ಸಂಬಂಧಿಸಿದೆ. ಅದೇ ರೀತಿಯಲ್ಲಿ, DHLJ ಎಂಬುದು KOSQ ಗೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ, RVZX ಎಂಬುದು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

Ans

✗ A. YBFE

✓ B. YCGE

✗ C. YCFE

✗ D. YDFN

Q.70 ಒಂದು ಬಲದಿಂದ ನಡೆದ ಕೆಲಸದ ಕುರಿತ ವೈಜ್ಞಾನಿಕ ವ್ಯಾಖ್ಯಾನವನ್ನು ಯಾವ ಸನ್ನಿವೇಶವು ಅತ್ಯುತ್ತಮವಾಗಿ ವಿವರಿಸುತ್ತದೆ?

Ans

✗ A. ನಿಶ್ಚಲ ಗೋಡೆಯ ವಿರುದ್ಧವಾಗಿ ಗರಿಷ್ಠ ಯತ್ನದಿಂದ ತಳ್ಳುವುದು

✗ B. ಒಂದು ಪುಸ್ತಕವನ್ನು ಮೇಜಿನ ಮೇಲೆ ನಿಧಾನವಾಗಿ ಜಾರಿಸದೆ ಇಡುವುದು

✓ C. ಒಬ್ಬ ವ್ಯಕ್ತಿಯು ಒಂದು ಪೆಟ್ಟಿಗೆಯನ್ನು ಗುರುತ್ವದ ವಿರುದ್ಧ ಲಂಬವಾಗಿ ಮೇಲಕ್ಕೆ ಎತ್ತುವುದು

✗ D. ಸಮತಟ್ಟಾದ ನೆಲದ ಮೇಲೆ ಸ್ಥಿರ ವೇಗದಲ್ಲಿ ಚೀಲವನ್ನು ಸಾಗಿಸುವುದು

Q.71 ಈ ಪ್ರಶ್ನೆಯಲ್ಲಿ, ಈ ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳ ನಂತರದ ಷರತ್ತುಗಳ ಪ್ರಕಾರ ಅಕ್ಷರ ಸಂಕೇತಗಳನ್ನು ಬಳಸಿಕೊಂಡು ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಸಂಕೇತಿಸಲಾಗುತ್ತದೆ. ಈ ಷರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯೇ ನಿಮ್ಮ ಉತ್ತರವಾಗಿದೆ.ಒಂದುವೇಳೆ ಯಾವುದೇ ಷರತ್ತುಗಳು ಅನ್ವಯಿಸದಿದ್ದರೆ, ಕೋಷ್ಟಕದಲ್ಲಿ ನೀಡಲಾದಂತೆ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನೇ ನೇರವಾಗಿ ಅನುಸರಿಸಬೇಕು.

ಸಂಖ್ಯೆ/ಚಿಹ್ನೆ 4 5 ? ! 9 7 $ # 6 +

ಸಂಕೇತ B O Q P S X M F W V

ಷರತ್ತುಗಳು –
(i) ಒಂದು ವೇಳೆ ಮೊದಲ ಅಂಶವು ಚಿಹ್ನೆಯಾಗಿದ್ದರೆ ಮತ್ತು ಕೊನೆಯ ಅಂಶವು ಸಂಖ್ಯೆಯಾಗಿದ್ದರೆ, ಅವುಗಳ ಸಂಕೇತಗಳನ್ನು ಪರಸ್ಪರ ಬದಲಾಯಿಸಿ.
(ii) ಒಂದು ವೇಳೆ ಎರಡನೇ ಮತ್ತು ಮೂರನೇ ಅಂಶಗಳು ಬೆಸ ಸಂಖ್ಯೆಗಳಾಗಿದ್ದರೆ, ಮೂರನೆಯದನ್ನು ಎರಡನೆಯ ಸಂಕೇತವಾಗಿ ಸಂಕೇತಿಸಿ.
(iii) ಒಂದು ವೇಳೆ ನಾಲ್ಕನೇ ಅಂಶವು ಚಿಹ್ನೆಯಾಗಿದ್ದರೆ ಮತ್ತು ಐದನೇ ಅಂಶವು ಒಂದು ಸಂಖ್ಯೆಯಾಗಿದ್ದರೆ, ಎರಡನ್ನೂ © ಎಂದು ಸಂಕೇತಿಸಿ

ಈ ಕೆಳಗಿನ ಗುಂಪಿನ ಸಂಕೇತ ಏನಾಗಿರಬಹುದು?
4 5 ? ! 9

Ans

✓ A. BOQ©©

✗ B. FOQPS

✗ C. BOWPS

✗ D. BOQPM

Q.72 ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಎಂದು ಗುರುತಿಸಲಾದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಈ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಬೇಕು ಮತ್ತು ಅತ್ಯಂತ ಸೂಕ್ತವಾದ ಉತ್ತರವನ್ನು ಆರಿಸಬೇಕು.
ಪ್ರಶ್ನೆ:
A, E, Z, M ಮತ್ತು D ಎಂಬ 5 ಕೋಲುಗಳಲ್ಲಿ, ಪ್ರತಿಯೊಂದು ಬೇರೆ ಬೇರೆ ಎತ್ತರವನ್ನು ಹೊಂದಿದ್ದು, ಯಾವ ಕೋಲು ಅತ್ಯಂತ ಉದ್ದವಾಗಿದೆ?

ಹೇಳಿಕೆಗಳು:
(I) M ಕೋಲು E ಗಿಂತ ಉದ್ದವಾಗಿದೆ. E ಕೋಲು D ಗಿಂತ ಉದ್ದವಾಗಿದೆ.
(II) D ಕೋಲು A ಗಿಂತ ಗಿಡ್ಡವಾಗಿದೆ, ಆದರೆ Z ಗಿಂತ ಉದ್ದವಾಗಿದೆ.

Ans

✗ A. ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ

✗ B. ಹೇಳಿಕೆ I ಮತ್ತು ಹೇಳಿಕೆ II ಇವೆರಡರ ಒಟ್ಟು (ಮತ್ತು ಕೇವಲ ಹೇಳಿಕೆ I ಅಥವಾ ಕೇವಲ ಹೇಳಿಕೆ II ಅಲ್ಲ) ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆ

✗ C. ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ

✓ D. ಹೇಳಿಕೆ I ಮತ್ತು ಹೇಳಿಕೆ II ಎರಡರ ಮಾಹಿತಿಗಳನ್ನು ಒಟ್ಟಾಗಿಸಿದರೂ ಪ್ರಶ್ನೆಗೆ ಉತ್ತರಿಸಲು **ಸಾಕಾಗುವುದಿಲ್ಲ**

Q.73 ಈ ಕೆಳಗಿನ ಯಾವ ಸಂಖ್ಯೆಯು 46 ಮತ್ತು 41 ಎರಡರಿಂದಲೂ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆ?

Ans
- ✔ A. 62238
- ✘ B. 62810
- ✘ C. 60607
- ✘ D. 63842

Q.74 A, B, C, D, E, F ಮತ್ತು G ಎಂಬ ಏಳು ಜನರು ಉತ್ತರಕ್ಕೆ ಮುಖ ಮಾಡಿ ಒಂದು ನೇರ ಸಾಲಿನಲ್ಲಿ ಕುಳಿತಿದ್ದಾರೆ. C ಯು ಸಾಲಿನ ಬಲ ತುದಿಯಿಂದ ಎರಡನೇ ಸ್ಥಾನದಲ್ಲಿ ಕುಳಿತಿದ್ದಾರೆ. B ಅವರ ಎಡಕ್ಕೆ ಮೂರು ಜನರು ಮಾತ್ರ ಕುಳಿತಿದ್ದಾರೆ. D ಅವರು A ಮತ್ತು E ಅವರ ತಕ್ಷಣದ ನೆರೆಹೊರೆಯವರು. F ಅವರು E ಅವರ ಬಲಕ್ಕೆ ಎರಡನೇ ಸ್ಥಾನದಲ್ಲಿ ಕುಳಿತಿದ್ದಾರೆ. ಹಾಗಾದರೆ G ಮತ್ತು D ನಡುವೆ ಎಷ್ಟು ಜನರು ಕುಳಿತಿದ್ದಾರೆ?

Ans
- ✘ A. ಒಬ್ಬರು
- ✔ B. ನಾಲ್ವರು
- ✘ C. ಮೂವರು
- ✘ D. ಇಬ್ಬರು

Q.75 ಒಂದು ಈವೆಂಟ್ ಮ್ಯಾನೇಜ್ಮೆಂಟ್ ಕಂಪೆನಿಯು ₹12,000 ಮೌಲ್ಯದ ಟಿಕೆಟ್ಟುಗಳನ್ನು ಖರೀದಿಸಿ 15% ಲಾಭದಲ್ಲಿ ಒಂದು ಬುಕಿಂಗ್ ಪಾಲುದಾರರಿಗೆ ಮಾರಾಟ ಮಾಡಿತು. ನಂತರ ಆ ಬುಕಿಂಗ್ ಪಾಲುದಾರನು ಖರೀದಿ ಬೆಲೆಯ ಮೇಲೆ 10% ಲಾಭದಲ್ಲಿ ಆ ಟಿಕೆಟ್ ಗಳನ್ನು ಮಾರಾಟ ಮಾಡಿದನು. ಹಾಗಾದರೆ ಅಂತಿಮ ಮಾರಾಟದ ಬೆಲೆ (₹ ಗಳಲ್ಲಿ) ಎಷ್ಟು?

Ans
- ✘ A. 15,400
- ✔ B. 15,180
- ✘ C. 14,580
- ✘ D. 13,800

"

Blackbook